**B**

**SL. No. : H**

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]
**ಸಂಕೇತ ಸಂಖ್ಯೆ : 95-K**

**CCE RR**
**Revised & Unrevised**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8
**Code No. : 95-K**

# ವಿಷಯ : ಸಮಾಜಶಾಸ್ತ್ರ

# Subject : SOCIOLOGY

**(ಕನ್ನಡ ಭಾಷಾಂತರ / Kannada Version)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 21. 06. 2019 ] [ Date : 21. 06. 2019

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-30 ರವರೆಗೆ ] [ Time : 9-30 A.M. to 12-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

### *ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :*

1. ಈ ಪ್ರಶ್ನೆಪತ್ರಿಕೆಯು 47 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. ಕಾರ್ಲ್ ಮಾರ್ಕ್ಸ್‌ನ ಸಿದ್ಧಾಂತಗಳಿಂದ ಪ್ರಭಾವಿತ ದೇಶ

   (A) ರಷ್ಯಾ

   (B) ಅಮೆರಿಕಾ

   (C) ಭಾರತ

   (D) ಇಂಗ್ಲೆಂಡ್

2. 1950 ರ ಯೋಜನಾ ನೀತಿಯು ಹೊಂದಿದ್ದ ಗುರಿ

   (A) ಕೈಗಾರಿಕಾಭಿವೃದ್ಧಿ ಸಾಧಿಸುವುದು

   (B) ಸಮತೋಲನ ಅಭಿವೃದ್ಧಿ ಸಾಧಿಸುವುದು

   (C) ಮಹಿಳೆಯ ಸಾಕ್ಷರತೆಯ ಪ್ರಮಾಣ ಹೆಚ್ಚಿಸುವುದು

   (D) ಸಾಮಾಜಿಕ ಪಿಡುಗುಗಳನ್ನು ನಿರ್ಮೂಲನೆ ಮಾಡುವುದು

3. 'ಕಾಸ್ಟ್ ಆ್ಯಂಡ್ ರೇಸ್ ಇನ್ ಇಂಡಿಯಾ' ಪುಸ್ತಕದ ಕರ್ತೃ

   (A) ಗಾಂಧೀಜಿ

   (B) ಜಿ.ಎಸ್. ಗುರ್ರೆ

   (C) ಎಸ್.ವಿ. ಕೇತ್ಕರ್

   (D) ಡಾ. ಬಿ.ಆರ್. ಅಂಬೇಡ್ಕರ್

4. ಹಿಂದೂ ಮತ್ತು ಇಸ್ಲಾಂ ಧರ್ಮಗಳನ್ನು ಪಾಲಿಸಿದವರು

   (A) ರಾಮದಾಸ್

   (B) ನಾಮದೇವ್

   (C) ತುಕಾರಾಂ

   (D) ಕಬೀರ್ ದಾಸ್

5. 'ಶ್ರೀ ರಾಮಕೃಷ್ಣ ಮಿಷನ್'ನನ್ನು ಸ್ಥಾಪಿಸಿದವರು

(A) ಸ್ವಾಮಿ ವಿವೇಕಾನಂದ

(B) ಮಹರ್ಷಿ ಕರ್ವೆ

(C) ದಯಾನಂದ ಸರಸ್ವತಿ

(D) ರಾಜಾ ರಾಮ್‌ಮೋಹನ್ ರಾಯ್

6. ಆದಿವಾಸಿಗಳನ್ನು 'ಗಿರಿಜನರು' ಎಂದು ಕರೆದವರು

(A) ಮಹಾತ್ಮ ಗಾಂಧೀಜಿ

(B) ಜಿ.ಎಸ್. ಗುರ್ರೆ

(C) ಡಿ.ಎನ್ . ಮಜುಂದಾರ್

(D) ಎಸ್.ಎಫ್. ನಾಡೆಲ್

7. ಬುಡಕಟ್ಟು ಸಮುದಾಯದಲ್ಲಿ ಸಾಕ್ಷರತೆಯ ಪ್ರಮಾಣ ಕುಸಿಯಲು ಕಾರಣ

(A) ಅರಣ್ಯನಾಶ

(B) ನಾಗರೀಕರಣ

(C) ಜೀತ ಪದ್ಧತಿ

(D) ಕೈಗಾರಿಕೀಕರಣ

8. ಕಂಪ್ಯೂಟರ್ ಮೂಲಕ ಸಂದೇಶ ಕಳುಹಿಸಲು ಅವಶ್ಯಕವಾಗಿರುವುದು

(A) ವಿದ್ಯುನ್ಮಾನ ಅಂಚೆ ( e-mail ) ಖಾತೆ

(B) ಅಂತರ್ಜಾಲ ( Internet ) ಖಾತೆ

(C) ಬ್ಯಾಂಕು ಖಾತೆ

(D) ಪೆ.ಟಿ.ಎಂ. ಖಾತೆ

9. ಭಾರತದ 'ಸಿಲಿಕಾನ್ ವ್ಯಾಲಿ'

(A) ಮುಂಬೈ

(B) ಬೆಂಗಳೂರು

(C) ಚೆನ್ನೈ

(D) ಕೊಲ್ಕತ್ತಾ

10. ಚೀನಾ ಮತ್ತು ಭಾರತಗಳ ನಡುವೆ ಯುದ್ಧ ನಡೆದ ವರ್ಷ

(A) 1962

(B) 1971

(C) 1999

(D) 1973

II. 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :**

$5 \times 1 = 5$

| ***A* ಪಟ್ಟಿ** | | ***B* ಪಟ್ಟಿ** | |
|---|---|---|---|
| (A) | ಬ್ರಹ್ಮ ಸಮಾಜ | (i) | ಸರ್ದಾರ್ ವಲ್ಲಭಬಾಯಿ ಪಟೇಲ್ |
| (B) | ಆರ್ಯ ಸಮಾಜ | (ii) | ಕಬೀರ್ ದಾಸ್ |
| (C) | ಸತ್ಯಶೋಧಕ ಸಮಾಜ | (iii) | ಬಾಲ ಗಂಗಾಧರ ತಿಲಕ |
| (D) | ಚಂಪಾರಣ್ಯ ಸತ್ಯಾಗ್ರಹ | (iv) | ಜ್ಯೋತಿರಾವ್ ಫುಲೆ |
| (E) | ಬಾರ್ದೋಲಿ ಸತ್ಯಾಗ್ರಹ | (v) | ದಯಾನಂದ ಸರಸ್ವತಿ |
| | | (vi) | ಮಹಾತ್ಮ ಗಾಂಧೀಜಿ |
| | | (vii) | ರಾಜಾ ರಾಮ್‌ಮೋಹನ್ ರಾಯ್ |

III. **ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 15 × 1 = 15

12. ಕೈಗಾರಿಕೀಕರಣ ಎಂದರೇನು ?

13. ಪ್ರಾದೇಶಿಕ ಅಸಮತೋಲನ ಎಂದರೇನು ?

14. ಬಡವರು ಸಾಮಾನ್ಯವಾಗಿ ಸಾಮಾಜಿಕ ಬದಲಾವಣೆಯನ್ನು ವಿರೋಧಿಸುತ್ತಾರೆ. ಏಕೆ ?

15. ಬ್ರಾಹ್ಮಣೇತರರಿಗೆ ಮೀಸಲಾತಿಯನ್ನು ನೀಡಿದ ಮೈಸೂರು ಒಡೆಯರ್‌ನ್ನು ಹೆಸರಿಸಿ.

16. ಸಿಖ್ ಧರ್ಮವನ್ನು ಯಾರು ಸ್ಥಾಪಿಸಿದರು ?

17. ಗೌತಮ ಬುದ್ಧನು ಬೌದ್ಧ ಧರ್ಮವನ್ನು ಏಕೆ ಸ್ಥಾಪಿಸಿದನು ?

18. ಹರ್ಬರ್ಟ್ ಬ್ಲೂಮರ್‌ರ ಪ್ರಕಾರ ಸಾಮಾಜಿಕ ಚಳುವಳಿಯನ್ನು ವ್ಯಾಖ್ಯಾನಿಸಿ.

19. ಪ್ರಾರ್ಥನಾ ಸಮಾಜವು ಮಾನವ ಸಮಾಜದ ಸೇವೆಯೇ ಪರಮಾತ್ಮನ ಸೇವೆಯಾಗಿರುತ್ತದೆಂದು ನಂಬಿತ್ತು. ಏಕೆ ?

20. ಬುಡಕಟ್ಟು ಪ್ರದೇಶಗಳ ಅಭಿವೃದ್ಧಿ ಕಾರ್ಯಪಡೆಯನ್ನು ಏಕೆ ರಚಿಸಲಾಗಿತ್ತು ?

21. ನೆಹರೂರವರು ತಮ್ಮ ಪಂಚಶೀಲ ತತ್ವಗಳಲ್ಲಿ ಬುಡಕಟ್ಟುಗಳ ಹಿತಾಸಕ್ತಿಯನ್ನು ಹೇಗೆ ಕಾಪಾಡಿದ್ದಾರೆ ?

22. ಬಹಳಷ್ಟು ಬುಡಕಟ್ಟು ಪುನರ್‌ವಸತಿ ಯೋಜನೆಗಳು ವಿಫಲವಾಗಿವೆ. ಏಕೆ ?

23. ಒಂಭತ್ತನೇ ಪಂಚವಾರ್ಷಿಕ ಯೋಜನೆಯು ಬುಡಕಟ್ಟುಗಳ ಅಭಿವೃದ್ಧಿಯಲ್ಲಿ ಒಂದು ಪ್ರಮುಖ ಮೈಲುಗಲ್ಲು. ಏಕೆ ?

24. ಬೋಗಾರ್ಡಸ್‌ರವರ ಪ್ರಕಾರ ಬುಡಕಟ್ಟು ಸಮೂಹ ಎಂದರೇನು ?

25. 'ಮೂಕನಾಯಕ' ಪತ್ರಿಕೆಯನ್ನು ಯಾರು ಪ್ರಾರಂಭಿಸಿದ್ದರು ?

26. ಎರಡನೇ ಮಹಾಯುದ್ಧದ ಸಮಯದಲ್ಲಿ ಜರ್ಮನಿಯ ಸರ್ವಾಧಿಕಾರಿಯಾಗಿದ್ದವರು ಯಾರು ?

IV. **ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** 14 × 2 = 28

27. ಆಧುನೀಕರಣದ ಉದ್ದೇಶಗಳೇನು ?

28. ಸಂಪರ್ಕ ಸಾಧನಗಳ ಬೆಳವಣಿಗೆಯಿಂದ ವಿಶ್ವದ ಗಾತ್ರ ಕುಗ್ಗಿದೆ. ಸ್ಪಷ್ಟೀಕರಿಸಿ.

29. ಸಾಮಾಜಿಕ ಬದಲಾವಣೆಯ ರೂಪ ಮತ್ತು ಗತಿ ಬೇರೆಯಾಗಿರುತ್ತದೆ. ಏಕೆ ?

30. ಸಮಾಜವು ಸಾಮಾಜಿಕ ಬದಲಾವಣೆಯನ್ನು ಏಕೆ ವಿರೋಧಿಸುತ್ತದೆ ?

31. ಜಾಗತೀಕರಣವು ಪ್ರಾದೇಶಿಕ ಅಸಮಾನತೆಯನ್ನು ಹೆಚ್ಚಿಸುತ್ತಿದೆ. ಸ್ಪಷ್ಟೀಕರಿಸಿ.

32. ಸಾಂಪ್ರದಾಯಿಕ ಮನಃಸ್ಥಿತಿಯು ಪ್ರಗತಿ ಮತ್ತು ಸಾಮಾಜಿಕ ಬದಲಾವಣೆಯನ್ನು ವಿಳಂಬಗೊಳಿಸುತ್ತಿದೆ. ಹೇಗೆ ?

33. ಭಾರತೀಯ ಸಮಾಜವನ್ನು ಅಧ್ಯಯನ ಮಾಡಲು ಬಯಸುವ ವ್ಯಕ್ತಿ ಜಾತಿ ಪದ್ಧತಿಯನ್ನು ಅರ್ಥಮಾಡಿಕೊಳ್ಳಬೇಕು. ಏಕೆ ?

34. ಮೆಕ್ಕೈವರ್‌ರವರ ಪ್ರಕಾರ ಜಾತಿ ಪದ್ಧತಿಯ ಸ್ವರೂಪ ಬರೆಯಿರಿ.

35. ಸಾಮಾಜಿಕ ಚಳುವಳಿಗಳ ಉದ್ದೇಶಗಳಾವುವು ?

36. ಮನುವಿನ ಮನುಸ್ಮೃತಿಯು ಮಹಿಳೆಯರ ಬಗ್ಗೆ ಗೊಂದಲವನ್ನು ಸೃಷ್ಟಿಸುತ್ತದೆ. ಸಮರ್ಥಿಸಿ.

37. ಹಂಟರ್ ಆಯೋಗವು ಮಹಿಳಾ ಶಿಕ್ಷಣದಲ್ಲಿ ಒಂದು ಬಹುಮುಖ್ಯ ಪಾತ್ರವಹಿಸಿದೆ. ವಿವರಿಸಿ.

38. ಮಹಿಳಾ ಸಬಲೀಕರಣಕ್ಕೆ ಕಾರಣವಾಗಿರುವ ಯಾವುದಾದರೂ ನಾಲ್ಕು ಅಂಶಗಳನ್ನು ಪಟ್ಟಿ ಮಾಡಿ.

39. ಬುಡಕಟ್ಟು ಸಮುದಾಯಗಳಲ್ಲಿ ಅತೀ ವೇಗದ ಬದಲಾವಣೆಯಾಗುತ್ತಿದೆ. ಏಕೆ ?

40. ಗಣಕಯಂತ್ರ (ಕಂಪ್ಯೂಟರ್) ತಂತ್ರಜ್ಞಾನದ ಅಭಿವೃದ್ಧಿಯು ಸಂಪರ್ಕ ಮಾಧ್ಯಮದಲ್ಲಿ ಕ್ರಾಂತಿಯನ್ನುಂಟು ಮಾಡಿದೆ. ಸಮರ್ಥಿಸಿ.

V. **ಈ ಕೆಳಗಿನ ಪ್ರಶ್ನೆಗಳಿಗೆ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

41. ಸಾಮಾಜಿಕ ಬದಲಾವಣೆಗೆ ಜಾತಿ ಅಡ್ಡಿಯಾಗಿದೆ. ವಿವರಿಸಿ.

42. ಪ್ರತಿಭಟನಾತ್ಮಕ ಚಳುವಳಿಗಳ ಲಕ್ಷಣಗಳೇನು ?

43. ಬ್ರಿಟಿಷರ ಅವಧಿಯಲ್ಲಿ ಭಾರತದಲ್ಲಿದ್ದಂತಹ ಮಹಿಳಾ ಸಂಘಟನೆಗಳನ್ನು ಹೆಸರಿಸಿ.

44. ಸ್ವತಂತ್ರ್ಯ ಭಾರತದಲ್ಲಿ ಸ್ತ್ರೀಯರ ಸ್ಥಾನಮಾನ ಬಹಳಷ್ಟು ಸುಧಾರಿಸಿದೆ. ಏಕೆ ?

45. ಬುಡಕಟ್ಟು ಸಮುದಾಯಗಳ ಕಲ್ಯಾಣಕ್ಕಾಗಿ ಜಾರಿಗೊಳಿಸಿರುವ ಕಾನೂನಾತ್ಮಕ ಕ್ರಮಗಳನ್ನು ತಿಳಿಸಿ.

46. ಟೆಲಿವಿಷನ್‌ನಿಂದಾಗುವ ಅನುಕೂಲಗಳನ್ನು ಪಟ್ಟಿ ಮಾಡಿ.

VI. **ಈ ಕೆಳಗಿನ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ :** $1 \times 4 = 4$

47. ಔಪಚಾರಿಕ ಶಿಕ್ಷಣವು ಪ್ರಚಲಿತ ಸಾಮಾಜಿಕ ಜೀವನದ ಮೇಲೆ ಉಂಟು ಮಾಡಿರುವ ಪ್ರಮುಖ ಪರಿಣಾಮಗಳನ್ನು ವಿವರಿಸಿ.